**"ಹೆಣ್ಣೆಂದರೇ ಯಾತನೆ**
**ತೋರಿಸಿಹನದ ಬುದ್ಧ**
**ಇನ್ನೊಬ್ಬ ಹೆಣ್ಣೊಂದಿಗೆ ಗಂಡನ ಹಂಚಿಕೊಳ್ಳುವ**
**ಯಾತನೆ ಕೆಲವರಿಗೆ**
**ಒಮ್ಮೆ ಮಗುವ ಹೆರುವುದೂ ಯಾತನೆ ಕೆಲವರಿಗೆ**
**ಸಾಕಿನ್ನು ಯಾತನೆ ಎಂದು**
**ಕೆಲವು ಹೆಂಗಸರು ಗಂಟಲ ಸೀಳಿಕೊಂಡರೆ**
**ಕೆಲವರು ವಿಷ ಉಣ್ಣುವರು**
**ಬಸಿರಲಿ ಕೆಲವರು ಜೀವ ತೆತ್ತರೆ**
**ತಾಯಿ ಮಗುವಿಬ್ಬರಿಗೂ ಯಾತನೆ"**

ಇನ್ನೊಂದು ಪದ್ಯದಲ್ಲಿ ಥೇರಿಯೊಬ್ಬಳು,
**"ಕಾಯವ ಕಾಯ್ದುಕೋ,**
**ಕೊನೆಯವರೆಗಿರುವುದು ಅದೊಂದೇ**
**ಇದಾದ ಮೇಲೆ ಉಳಿಸಬೇಡ ಅದ ಸಾವನ್ನೊಯ್ಯುವ**
**ವಾಹನವಾಗಷ್ಟೇ"**– ಎಂದು ಬರೆದು ಹೆಣ್ಣನ್ನು ದೇಹ ಬದ್ಧವಾಗಷ್ಟೇ ನೋಡುವ ಸಮಾಜದ ದೃಷ್ಟಿಯನ್ನು ಪ್ರಶ್ನಿಸುತ್ತಾಳೆ. ಇನ್ನೊಬ್ಬ ಥೇರಿ ಸುಮಂಗಲಮಾತಾ ತನ್ನೊಳಗಿನ ಕೋಪ ಮತ್ತು ಲೈಂಗಿಕ ಬಯಕೆಯನ್ನು ನಾಶಪಡಿಸಿಕೊಂಡ ಕ್ಷಣವನ್ನು ವಿವರಿಸಲು, "ನನಗೆ ಬಿದಿರು ಎರಡಾಗಿ ಸೀಳುವಾಗ ಹೊರಹೊಮ್ಮುವ ಸದ್ದು ನೆನಪಾಯಿತು" ಎಂದು ಹೇಳುತ್ತಾ ಹೊಸ ಪ್ರತಿಮೆ ಸೃಷ್ಟಿಸುತ್ತಾಳೆ. ಭಿಕ್ಕುಗಳಿಗೆ ನಿರ್ವಾಣವೆನ್ನುವುದು ಅಮೂರ್ತ ಕಲ್ಪನೆಯಾದರೆ ಭಿಕ್ಕುಣಿಯರಿಗೆ ಅದು ತಮ್ಮ ಅನುಭವದ ಭಾಗವಾಗಿಯೇ ವಿಕಸಿತವಾಗಿದೆ ಎನ್ನುತ್ತಾರೆ ಲೇಖಕಿ. ಅದೇ ಕಾರಣಕ್ಕೆ ಭಿಕ್ಕುಗಳು ದೇಹಕ್ಕೆ ಸಂಬಂಧಿಸಿ ಧ್ಯಾನಿಸುವಾಗ ಸ್ಮಶಾನದ ಗಂಡುಹೆಣಗಳನ್ನು ಉದಾಹರಿಸುತ್ತಾ ಮಾತನಾಡಿದರೆ, ಮಹಿಳೆಯರು ನಿಧಾನವಾಗಿ ಕೊಳೆಯುತ್ತಾ ಮುಪ್ಪಿನೆಡೆಗೆ ಸಾಗುವ ತಮ್ಮ ದೇಹಗಳನ್ನೇ ಉದಾಹರಿಸಿಕೊಂಡು ಮಾತನಾಡುತ್ತಿದ್ದರಂತೆ.

## ಥೇರಿಯರ ಕಥೆ

ಥೇರೀಗಾಥಾದ ಸಾರ ತಿಳಿಯಲು ಈ ಪದ್ಯಗಳ ಕರ್ತೃಗಳಾದ ಥೇರಿಯರ ಬದುಕನ್ನೊಮ್ಮೆ ಹತ್ತಿರದಿಂದ ಕಾಣಬೇಕು. ಅತ್ಯಂತ ಸುಂದರವಾಗಿದ್ದ ಖೇಮಾ, ದೊರೆ ಬಿಂಬಿಸಾರನ ಹೆಂಡತಿ. ಬುದ್ಧ ಸೌಂದರ್ಯವನ್ನು ಹೀಗಳೆಯುತ್ತಾನೆ ಎಂಬ ಕಾರಣಕ್ಕೆ ಅವಳು ಬುದ್ಧನನ್ನು ಭೇಟಿಯಾಗಲು ಹಿಂಜರಿಯುತ್ತಾಳೆ. ಪತ್ನಿಗೆ ಬುದ್ಧನ ಬೋಧನೆಯನ್ನು ಕೇಳಿಸಬೇಕೆಂಬ ಆಸೆ ಬಿಂಬಿಸಾರನಿಗೆ. ಕಡೆಗೂ ಖೇಮಾ ಒಂದು ದಿನ ಬುದ್ಧ ಪ್ರವಚನ ಕೊಡುವ ಜಾಗಕ್ಕೆ ಹೋಗುವುದಾಗುತ್ತದೆ.

ಅವಳು ಹೋದಾಗ ಸುಂದರ ತರುಣಿಯೊಬ್ಬಳು ಬುದ್ಧನಿಗೆ ಚಾಮರ ಬೀಸುತ್ತಿರುವಂತೆ ಕಾಣಿಸುತ್ತದೆ. ಆಕೆಯ ಸೌಂದರ್ಯಕ್ಕೆ ಮರುಳಾಗಿ ಖೇಮಾ ಆಕೆಯನ್ನೇ ದಿಟ್ಟಿಸುತ್ತಾಳೆ. ಖೇಮಾ ದಿಟ್ಟಿಸುತ್ತಿರುವಂತೆಯೇ ಆ ಯುವತಿ ಮಧ್ಯ ವಯಸ್ಕಳಾಗಿ, ಮುಪ್ಪಿನ ಮುದುಕಿಯಾಗಿ, ಮೂಳೆಯ ಚಕ್ಕಳವಾಗಿ ಹಾಗೆಯೇ ಕೆಳಗೆ ಬೀಳುತ್ತಾಳೆ. ಈ ಘೋರ ದೃಶ್ಯ ಕಂಡಿದ್ದೇ ಖೇಮಾಳಿಗೆ ಸೌಂದರ್ಯದ ಭ್ರಮೆ ಹರಿದುಹೋಗುತ್ತದೆ.

ಬೇರೆ ದಾರಿಯಿಲ್ಲದೇ ತಂದೆಯನ್ನೇ ಮದುವೆಯಾಗಿ, ದೇಹವಾಂಛೆಯ ಮೇಲೆ ಜುಗುಪ್ಸೆ ಹೊಂದಿದ್ದ ಉಪ್ಪಲವಣ್ಣಾ; "ಹೆಣ್ಣು ಅಂತರ್‌ದೃಷ್ಟಿಯನ್ನು ಬೆಳೆಸಿಕೊಂಡು ತನ್ನ ನಿಯಂತ್ರಣದಲ್ಲಿರುವ ದೇಹ- ಮನಸ್ಸುಗಳ ಜೊತೆ ಅನುಸಂಧಾನ ಮಾಡಿ, ವಿಮೋಚನೆಯನ್ನು ಪಡೆಯುವ ಕ್ರಮವೇ ಅತ್ಯಂತ ವಿಶಿಷ್ಟವಾದುದು" ಎಂದು ಬೋಧಿಸಿದ ಉತ್ತರಾ; ತನ್ನನ್ನು ಗಣಿಕೆಯಾಗಿಸಿದ ಕಾಶೀ ನಗರದಲ್ಲೇ ಭಿಕ್ಕುಣಿಯಾಗಿ ನಿಬ್ಬಾಣ ಸಾಧಿಸಿದ ಅದ್ಧಕಾಶೀ... ಹೀಗೆ ಹತ್ತಾರು ಸ್ತ್ರೀಕಥನಗಳು ಈ ಕೃತಿಯಲ್ಲಿ ಕಾಣಸಿಗುತ್ತವೆ. ಇನ್ನು ಸಾವಿಲ್ಲದ ಮನೆಯ ಸಾಸಿವೆ ಹುಡುಕಿ ಅಲೆದ ಕಿಸಾಗೋತಮಿಯ ಕಥೆಯಂತೂ ಕನ್ನಡದ ಮನಸ್ಸುಗಳಲ್ಲಿ ಈಗಾಗಲೇ ಬೇರುಬಿಟ್ಟಿದೆ.

## ಮುಕ್ತ ಸಂವಾದಕ್ಕೆ ಸಾಕ್ಷಿ

ಬೌದ್ಧ ಸಂಘಗಳಲ್ಲಿ ಹೆಣ್ಣುಮಕ್ಕಳು ಯಾವುದೇ ಸಂಗತಿಯನ್ನೂ ಮುಕ್ತವಾಗಿ ಮಾತನಾಡುವ ಸ್ವಾತಂತ್ರ್ಯ ಗಳಿಸಿಕೊಂಡಿದ್ದರು. ಭಿಕ್ಕುಣಿ ಪ್ರಕೀರ್ಣಕದ 16 ಮತ್ತು 17ನೇ ನಿಯಮಗಳು ಮುಟ್ಟಿನ ಬಟ್ಟೆಗಳನ್ನು ಎಲ್ಲಿ ಒಗೆಯಬೇಕು ಎಂಬುದಾಗಿದೆ. ಇಂದಿಗೂ ಸಾರ್ವಜನಿಕ ಸ್ಥಳಗಳಲ್ಲಿ ಹೆಣ್ಣಿನ ದೇಹಕ್ಕೆ